# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/08 /2020-21 ದಿನಾಂಕ: 19.12.2020

-:ದಿನಾಂಕ:04-12-2020 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:19-12-2020ರ ಶನಿವಾರ ಬೆಳಗ್ಗೆ 11.00 ಘಂಟೆಗೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

ಸಭೆಗೆ ಹಾಜರಿದ್ದವರು:-

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀಮತಿ.ಮಮತಾ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) | ಹಾಜರಿದ್ದರು. |
| 5. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನಿರೀಕ್ಷಕರು. | ಹಾಜರಿದ್ದರು. |
| 6. | ಶ್ರೀ ಆನಂದ.ಆರ್ | ಬೆಳತ್ತೂರು ಶಕ್ತಿ ಕೇಂದ್ರ | ಹಾಜರಿದ್ದರು. |
| 7. | ಶ್ರೀ.ಸುರೇಶ್ ಬಾಬು | ಮಾರ್ಷಲ್ ಹೂಡಿ | ಹಾಜರಿದ್ದರು. |
| 8. | ಶ್ರೀ.ಸತೀಶ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 9. | ಶ್ರೀ.ಮಂಜುನಾಥ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 10. | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 11. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 12. | ಶ್ರೀ.ನಾಗರಾಜ | SWM Sup. | ಹಾಜರಿದ್ದರು. |
| 13. | ಶ್ರೀ.ಶೇಖರಪ್ಪ | SWM Sup. | ಹಾಜರಿದ್ದರು. |
| 14. | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 15. | ಶ್ರೀ.ಸಂಪಂಗಿರಾಮಯ್ಯ | JE Bescom | ಹಾಜರಿದ್ದರು. |
| 16. | ಶ್ರೀ.ಹರೀಶ್ | SWM Sup. | ಹಾಜರಿದ್ದರು. |
| 17. | ತಿಮ್ಮರಾಯಪ್ಪ.ಟಿ | SWM Sup. | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- 1) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ.10096/2020(GIM-PIL) ರ ನಿರ್ದೇಶನದಲ್ಲಿ ತಿಳಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ Begging and Hawking Children Identification Survey ಕೈಗೊಳ್ಳಬೇಕಾಗಿದ್ದು, ವಾರ್ಡ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳಲ್ಲಿ, ಕೊಳಗೇರಿಗಳು (ಸ್ಲಂ), ಬಸ್ ಮತ್ತು ರೈಲ್ವೆ ನಿಲ್ದಾಣ ಹಾಗೂ ಇತರೆ ಸ್ಥಳಗಳನ್ನು ಸ್ಥಳೀಯ ನಿವಾಸಿ ಕಲ್ಯಾಣ ಸಂಘ (Residential Welfare Association) (RWA) ಹಾಗೂ ಸ್ವಯಂ ಸೇವಾ ಸಂಘಗಳ (NGO) ಮುಖೇನ ಗುರುತಿಸಿ, ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಕಲೆಹಾಕಲು ಕ್ರಮ ವಹಿಸುವುದು.
- 2) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ.15768/2013 ರ ಹಿನ್ನೇಲೆಯಲ್ಲಿ ಹೊರಡಿಸಲಾದ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಶಾಲೆಗೆ ಹಾಜರಾಗಲು ನಗರ ಸ್ಥಳೀಯ ಸಂಸ್ಥೆಗಳು (ಬಿಬಿಎಂಪಿ ಒಳಗೊಂಡಂತೆ) ವಾರ್ಡ್‌ನ ಸದಸ್ಯರನ್ನು ಅದರ ಅಧ್ಯಕ್ಷರನ್ನಾಗಿಸಿ ವಾರ್ಡ್ ಕಮಿಟಿಯನ್ನು ರಚಿಸತಕ್ಕದ್ದು. ಆ ವಾರ್ಡ್ ವ್ಯಾಪ್ತಿಯ ಮುಖ್ಯೋಪಾಧ್ಯಾಯರು, ಅಂಗನವಾಡಿ ಕಾರ್ಯಕರ್ತರು, ಎನ್.ಜಿ.ಓ ಗಳನ್ನು ಸದಸ್ಯರನ್ನಾಗಿ ಮಾಡಿಕೊಂಡು ಕಾಲಕಾಲಕ್ಕೆ ಸದರಿ ಸಮಿತಿಯು ಕಾಲಕಾಲಕ್ಕೆ ತಪಾಸಣೆ ನಡೆಸಿ, ಶಾಲೆಯಿಂದ ವಂಚಿತರಾದ ಹಾಗೂ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ, ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ಕಾರ್ಖಾನೆಗಳು, ಮಾರುಕಟ್ಟೆ ಮುಂತಾದ ಸ್ಥಳಗಳಲ್ಲಿ ಮಕ್ಕಳನ್ನು ಗುರುತಿಸಿ, ಸಂಬಂಧಿಸಿದ ಇಲಾಖೆಗಳಾದ ಮಕ್ಕಳ ಕಲ್ಯಾಣಾಧಿಕಾರಿ (CDPO) ಕಾರ್ಮಿಕ ಇಲಾಖೆ ಹಾಗೂ ಶಿಕ್ಷಣ ಇಲಾಖೆಯು ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಕ್ರಮ ವಹಿಸುವುದು ಎಂಬುದಾಗಿ ಇದ್ದು, ಇದಕ್ಕೆ ಪ್ರತ್ಯೇಕವಾದ APP ಸಿದ್ದಪಡಿಸಲಾಗಿದ್ದು ಸಧ್ಯದಲ್ಲೇ ಈ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಪೂರ್ವಸಿದ್ದತೆಗಳನ್ನು ಮಾಡಿಕೊಳ್ಳತಕ್ಕದ್ದು ಹಾಗೂ ಸಭೆಯಲ್ಲಿ ಚರ್ಚಿಸುವುದು.
- 3) ವಾರ್ಡಿನ ವ್ಯಾಪ್ತಿ ಪ್ರದೇಶದಲ್ಲಿ ರಾತ್ರಿಹೊತ್ತು ತಪಾಸಣೆ ಕೈಗೊಂಡು ಬೀದಿ ಬದಿ ಮಲಗುವವರ, ನಿರಾಶ್ರಿತರ ಸಂಖ್ಯೆಯನ್ನು ಕಲೆಹಾಕಲು ಅಗತ್ಯ ಕ್ರಮವಹಿಸುವುದು.
- ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಆದೇಶದಂತೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿದ್ದು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ.10096/2020(GIM-PIL) ರ ನಿರ್ದೇಶನದಲ್ಲಿ ತಿಳಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ Begging and Hawking Children Identification Survey ಕೈಗೊಳ್ಳಬೇಕಾಗಿರುವುದರಿಂದ ಸಭೆಯಲ್ಲಿ ಹಾಜರಿದ್ದ ಆರ್‌ಡಬ್ಲ್ಯೂಎ ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಹೂಡಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಲಸೆ ಕಾರ್ಮಿಕರ ಹಾಗೂ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಲು ಮತ್ತು ವಾರ್ಡಿನ ವ್ಯಾಪ್ತಿ ಪ್ರದೇಶದಲ್ಲಿ ರಾತ್ರಿಹೊತ್ತು ತಪಾಸಣೆ ಕೈಗೊಂಡು ಬೀದಿ ಬದಿ ಮಲಗುವವರ, ನಿರಾಶ್ರಿತರ ಸಂಖ್ಯೆಯನ್ನು ಹಾಗೂ ಮಾಹಿತಿಯನ್ನು ಕಲೆಹಾಕಲು ಕೋರಲಾಯಿತು.

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಸದರಿ ವಿಚಾರವಾಗಿ ಮಮತಾ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರು ಮೊದಲಿಗೆ ತ್ಯಾಜ್ಯ ವಿಂಗಡಣೆ ಬಗ್ಗೆ ಪ್ರತಿ ಮನೆಯಿಂದ ಕಸ ವಿಂಗಡಿಸಿ ಹಸಿ ಕಸ ಸಂಗ್ರಹಿಸುವ ಬಗ್ಗೆ ಈಗಾಗಲೇ ಗುತ್ತಿಗೆದಾರರಿಗೆ ಸೂಕ್ತವಾಗಿ ವಿಲೆವಾರಿ ಮಾಡಲು ನಿರ್ದೇಶನ ನೀಡಿದ್ದು ಅದೇ ರೀತಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಿದ್ದೇನೆಂದು ತಿಳಿಸಿದರು.
- ಅದೇ ರೀತಿಯಾಗಿ ಹಸಿ ಕಸ ವೇಸ್ಟ್ ಕಲೆಕ್ಷನ್ ಬಗ್ಗೆ ಅದಕ್ಕೆ ಸಂಬಂಧಿಸಿದಂತೆ ಹಸಿ ಕಸ ವೇಸ್ಟ್ ಕಲೆಕ್ಷನ್ ಸಂಪೂರ್ಣವಾಗಿ ತೆಗೆಯಬೇಕೆಂದು ಸೂಚಿಸಿದ್ದೇನೆಂದು ಸಭೆಗೆ ತಿಳಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್‌ವಾರು ವಿಂಗಡಣೆಯನ್ನು ಮಾಡಿದ್ದು ಅದರಂತೆ ಮುಂದಿನ ದಿನಗಳಲ್ಲಿ ಬ್ಲಾಕ್ ವಿಂಗಡಣೆಯಂತೆ ಆಟೋಗಳು ಸಂಗ್ರಹಣೆಗೆ ಹೋಗಲು ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

- ಆರ್.ಡಬ್ಲ್ಯೂ.ಎ. ಆರೋಗ್ಯ ಸ್ವಾಮಿ ರವರು ಆಟೋಗಳಿಗೆ ಮೈಕ್ ಅಳವಡಿಸಿರುತ್ತಾರೆ ಆದರೆ ಆಟೋ ಅನೌನ್ಸ್‌ಮೆಂಟ್ ಆಗುತ್ತಿರುವುದಿಲ್ಲ ಅದನ್ನು ಸರಿಪಡಿಸಲು ತಿಳಿಸಿರುತ್ತಾರೆ.
- ಆರೋಗ್ಯ ನಿರೀಕ್ಷಕರು ಇದನ್ನು ಆಟೋ ಅನೌನ್ಸ್‌ಮೆಂಟ್ ಮಾಡಲು ನಾಳೆಯಿಂದಲೇ ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಿದರು. ಮತ್ತು ಮಮತಾ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರು ಡ್ರೈವೆಸ್ಟ್ ಸೆಂಟರ್ ಕಟ್ಟಲು ಕನಿಷ್ಠ 40*60 ರ ಸರ್ಕಾರಿ ಜಾಗವನ್ನು ನೀಡಲು ಸಭೆಗೆ ಕೊರಿಕೊಂಡಿರುತ್ತಾರೆ, ಆದ್ದರಿಂದ ಸಂಬಂಧಪಟ್ಟವರಿಗೆ ಪತ್ರದ ಮುಖೇನ ಕೋರಿ ಜಾಗವನ್ನು ಕೊಟ್ಟರೆ ತಕ್ಷಣ ಡ್ರೈವೇಸ್ಟ್ ಸೆಂಟರ್ ನಿರ್ಮಿಸುತ್ತೇವೆಂದು ತಿಳಿಸಿದರು.
- ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ತೆಗೆದಿರುವುದಿಲ್ಲ ಎಂದು ತಿಳಿಸಿದರು ಇದಕ್ಕೆ ಸಂಬಂಧಿಸಿದಂತೆ ಮಮತಾ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರು ಕೆಲವು ದಿನಗಳು ಇಬ್ಬರು ಗುತ್ತಿಗೆದಾರರಿಗೆ ವಾರ್ಡ್ ವ್ಯಾಪ್ತಿಯಲ್ಲಿಯೂ ಕಸದ ಸಮಸ್ಯೆ ಉಂಟಾಗಬಾರದೆಂದು ನಿರ್ದೇಶನ ನೀಡಿರುತ್ತೇನೆ ನಂತರ ಮುಂದಿನ ಕ್ರಮ ಜರುಗಿಸುವುದಾಗಿ ತಿಳಿಸಿದರು.

**ಕಾಮಗಾರಿ ಇಲಾಖೆ:-**

- ಆನಂದ ಆರ್.ಡಬ್ಲ್ಯೂ.ಎ. ರವರು ಮೇಜರ್ ರೋಡ್‌ಗೆ ಸಂಬಂಧಸಿದಂತೆ ಕೆಲವು ರಸ್ತೆಗಳಲ್ಲಿ ಕಾಮಗಾರಿ ಕೆಲಸಗಳು ಮಾಡುತ್ತಿದ್ದು ಹಳ್ಳ ದಿನ್ನೆಗಳು ಇರುತ್ತವೆ ಹಾಗೂ ಗುಂಡಿಗಳು ಬಿದ್ದಿರುತ್ತವೆ ಎಂದು ತಿಳಿಸಿದರು.
- ಸಂಬಂಧಿಸಿದಂತೆ ಎಇಇ ಮೇಜರ್‌ರೋಡ್ ಮುನಿಯಪ್ಪ ರವರು ಸದರಿ ರಸ್ತೆಗಳಲ್ಲಿ ಕಾರ್ಯ ಪ್ರಗತಿಯಲ್ಲಿದ್ದು ಇದಕ್ಕೆ ಸಂಬಂಧಿಸಿದಂತೆ ಕೆಲಸ ಮಾಡಿಸುವುದಾಗಿ ತಿಳಿಸಿದರು. ಗ್ಯಾಸ್ ಲೈನ್‌ನಲ್ಲಿ ಅಗೆದಿರುವ ರಿಸ್ಟೊರೇಷನ್ ಕಾರ್ಯ ಈ ವಾರದಲ್ಲಿ ಶುರು ಮಾಡುತ್ತಾರೆಂದು ಎಇಇ ಮೇಜರ್‌ರೋಡ್ ಮುನಿಯಪ್ಪ ತಿಳಿಸಿದರು ಮತ್ತು ಪಿಎನ್‌ಸಿ ಶಾಲೆ ರಸ್ತೆಯನ್ನು ಪ್ರಗತಿ ಕಾರ್ಯವು ಮುಂದಿನ ವಾರದಲ್ಲಿ ಶುರುಮಾಡುತ್ತಾರೆಂದು ತಿಳಿಸಿದರು.
- ಮಾದೇಶ್ ಆರ್.ಡಬ್ಲ್ಯೂ.ಎ. ರವರು ಸಾದರಮಂಗಲ ಸ್ಮಶಾನಕ್ಕೆ ಸರ್ವೆ ಕಾರ್ಯ ಮಾಡಿಸಿ ಬೌಂಡರಿಯನ್ನು ಗುರುತಿಸಿ ಸ್ಮಶಾನಕ್ಕೆ ಕಾಂಪೌಂಡ್ ಮತ್ತು ಗೇಟ್‌ಅನ್ನು ಹಾಕಿಸಬೇಕೆಂದು ಮಾದೇಶ್ ರವರು ತಿಳಿಸಿರುತ್ತಾರೆ. ಮತ್ತು ಎಸ್.ಸಿ ಕಾಲೋನಿಗಳಿಗೆ ಕಡುಬಡವರಿಗೆ ಮನೆಗಳನ್ನು ನಿರ್ಮಿಸಿ ಕೊಡಬೇಕೆಂದು ಕೋರಿರುತ್ತಾರೆ ಮತ್ತು ಬೆಳತ್ತೂರು ಶಕ್ತಿ ಕೇಂದ್ರ, ಸಾದರಮಂಗಲ ಶಕ್ತಿ ಕೇಂದ್ರ, ಅಯ್ಯಪ್ಪನಗರ ಶಕ್ತಿಕೇಂದ್ರ ಈ ಭಾಗದಲ್ಲಿನ ಎಸ್.ಸಿ /ಎಸ್‌ಟಿ ಗಳಿಗೆ ಒಂಟಿ ಮನೆಗಳನ್ನು ಅತಿ ಹೆಚ್ಚು ನೀಡಬೇಕೆಂದು ಕೋರಿದರು. ಮತ್ತು ಮುಂದಿನ ಸಭೆಗೆ ಸಮಾಜ ಕಲ್ಯಾಣ ಇಲಾಖೆಯವರನ್ನು ಸಭೆಗೆ ತಪ್ಪದೆ ಹಾಜರಾಗಲು ಅಧ್ಯಕ್ಷರು ಸೂಚಿಸಿರುತ್ತಾರೆ. **ಅದರಂತೆ** ಸಮಾಜ ಕಲ್ಯಾಣ ಇಲಾಖೆಯಿಂದ ಬರುವ ಸೌಲಭ್ಯಗಳನ್ನು ಸಂಪೂರ್ಣವಾಗಿ ಒದಗಿಸಲು ಕೊರಿದರು.

**ವಿದ್ಯುತ್:-**

- ಆನಂದ ಆರ್.ಡಬ್ಲ್ಯೂ.ಎ. ರವರು 12.KVA. POLL ಗೆ LED ಲೈಟ್ ಅಳವಡಿಸಿದ್ದು ಇದು ಕೆಲಸ ನಿರ್ವಹಿಸುತ್ತಿರುವುದಿಲ್ಲ ಆದ್ದರಿಂದ Secondary line ಅಳವಡಿಸಿ ಕೆಲಸ ನಿರ್ವಹಿಸಲು ಕೋರಿದರು.
- ಬೆಳತ್ತೂರು ರಾಮಾಚಾರಿ ಕಾಂಪೌಂಡ್ ಸುತ್ತಮುತ್ತಲ ಪ್ರದೇಶಗಳಲ್ಲಿ Electrical Poll ಗಳು ಬಾಗಿರುವ ರೀತಿಯಲ್ಲಿರುತ್ತವೆ ಅದನ್ನು ಸರಿಪಡಿಸಲು ಬೆಸ್ಕಾಂ ಕಾಡುಗೋಡಿ ನವರಿಗೆ ತಿಳಿಸಲು ಕೋರಿದರು.
- ಬೆಸ್ಕಾಂ ಗೆ ಸಂಬಂಧಿಸಿದಂತೆ ಅಧಿಕಾರಿಗಳು ಸಭೆಗೆ ತಪ್ಪದೆ ಹಾಜರಾಗಲು ಆರ್.ಡಬ್ಲ್ಯೂ.ಎ. ರವರು ಕೊರಿರುತ್ತಾರೆ.

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

- ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ 110 ಹಳ್ಳಿಗಳಿಗೆ ಸಂಬಂಧಿಸಿದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸಭೆಗೆ ತಪ್ಪದೆ ಹಾಜರಾಗಲು ಸೂಚಿಸಿದರು.

**ಇತರೆ ವಿಷಯಗಳು**

- ಬೆಳತ್ತೂರು, ಕೊಡಿಗೇಹಳ್ಳಿ, ಸಾದರಮಂಗಲ, ಅಯ್ಯಪ್ಪನಗರ ಈ ಪ್ರದೇಶಗಳಲ್ಲಿ ಹಂದಿಗಳ ಕಾಟ ಹೆಚ್ಚಾಗಿದ್ದು ಇದನ್ನು ಹಿಡಿದು ಮತ್ತೆ ಬರದಂತೆ ನೋಡಿಕೊಳ್ಳಬೇಕೆಂದು ಆರ್.ಡಬ್ಲ್ಯೂ.ಎ. ರವರು ಕೋರಿರುತ್ತಾರೆ.
- ಸತೀಶ ಆರ್.ಡಬ್ಲ್ಯೂ.ಎ.ಅಯ್ಯಪ್ಪನಗರ ರವರು ವಾರ್ಡ್‌ನಲ್ಲಿ ಹಂದಿಗಳ ಕಾಟ ಹೆಚ್ಚಾಗಿರುತ್ತದೆ ಎಂದು ತಿಳಿಸಿರುತ್ತಾರೆ.
- ಆನಂದ ಆರ್.ಡಬ್ಲ್ಯೂ.ಎ. ರವರು ಸಹ ಹಂದಿಗಳ ಕಾಟದ ಬಗ್ಗೆ ತಿಳಿಸಿರುತ್ತಾರೆ.
- ಅದರಂತೆ ಅಧ್ಯಕ್ಷರು **ADAH** ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಆರ್.ಡಬ್ಲ್ಯೂ.ಎ. ರವರು ವಾರ್ಡ್‌ನ ಅಯ್ಯಪ್ಪನಗರ, ಕೊಡಿಗೇಹಳ್ಳಿ ಹಾಗೂ ಇನ್ನೂ ಮುಂತಾದ ಮುಖ್ಯ ರಸ್ತೆಗಳಲ್ಲಿ ಮಂಗಳಮುಖಿಯರು ಹೆಚ್ಚಾಗಿದ್ದು ಇವರು ಪ್ರತಿ ಅಂಗಡಿಗಳಿಗೆ ತೊಂದರೆಯಾಗುತ್ತದೆಂದು ತಿಳಿಸಿರುತ್ತಾರೆ.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

- **Covid-19 Contact Tracing** ಮತ್ತು **Testing** ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ವಾರ್ಡ್ ಸಮಿತಿ ನೋಡಲ್ ಅಧಿಕಾರಿ<br>ಡಾ//ಕಲ್ಪನಾ. ಹೂಡಿ–54<br>ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ<br>ಮಹದೇವಪುರ ವಲಯ | ವಾರ್ಡ್ ಸಮಿತಿ ಕಾರ್ಯದರ್ಶಿ<br>ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ–54 ಹೂಡಿ<br>ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ<br>ಮಹದೇವಪುರ ವಲಯ |